## ತುಮಕೂರು ಡಿಸ್ಟ್ರಿಕ್ಟ್.

## ಪ್ರಕಟನೆ.

ಆದರಡಿ ಕಂಡ ಡಿಪೋಬಳಿಗೆ ಅದರ ಯಜಮಾನಿಗಾಗಿ ಕಾಣಿಸಲ್ಪಟ್ಟ ಜಂಗಲ್‌ಗಳಿಂದ ನಾಟಾಗಳನ್ನ ತಯಾರಮಾಡಿ ಬಿದರು ಕಡಿದು ಸವುದೆ ಕತರಾಯಿಸಿ ಸಾಗಿಸುವದಕ್ಕು ಚಿಲ್ಲರೆ ಪಸಾರೆ ಜಿನಸುಗಳನ್ನ ಜಮಾಯಿಸಿ ಸಾಗಿಸುವದಕ್ಕು ಅಥವಾ ಸಾಗಿಸುವದಕ್ಕೆ ಮಾತ್ರ ವೆ ಆಗಲಿ 1890ನೇ ಜುಲೈ 31ನೇ ತಾರೀಖು ವಳಗಾಗಿ ಯಿಷ್ಟವುಳ್ಳವರು "ಟೆಂಡರ್" ಯಾನೆ ದರಖಾಸ್ತು ಕೊಡಬಹುದು.

| ತಾಲ್ಲೂಕು. | ಫಾರೆಸ್ಟು. | ಡಿಪೊ ಹೆಸರು. |
|---|---|---|
| ಮದ್ದಗಿರಿ .. | ಮದ್ದಗಿರಿ ಸ್ಟೇಟ್ ಫಾರೆಸ್ಟು | ಮದ್ದಗಿರಿ ಡಿಪೊ |
| ಡಿಟೋ .. | ಡಿಟೋ ಡಿಟೋ | ತುಮಕೂರು ಡಿಪೊ |
| ಶಿರಾ .. | ಬುಕ್ಕಾಪಟ್ಟಣ ಡಿಟೋ | ಜಿಲ್ಲೆ ಪಸಾರೆ ನಮೂನೆಯ ಸಾಮಾನುಗಳನ್ನು ಮತ್ತು ಬಿದರು ಕಡಿಯುವ ಕೆಲಸಕ್ಕೆ ಬೇಕಾಗುವ ಸಾಮಾನುಗಳನ್ನು ಸಾಗಿಸುವದಕ್ಕೆ |
| ಕುಣಿಗಲ್ .. | ಹುಲಿಯೂರು ದುರ್ಗ ಡಿಟೋ | |
| ತುಮಕೂರು .. | ದೇವರಾಯದುರ್ಗ ಸ್ಟೇಟ್ ಫಾರೆಸ್ಟು ಮತ್ತು ಡಿಸ್ಟ್ರಿಕ್ಟು ಜಂಗಲ್‌ಗಳು | |

2. ಪ್ರತಿ ಬಂದು ದರಖಾಸ್ತನ್ನ ಲಕೋಟೆ ಮೇಲೆಯು "ಇಂಥಾ ಜಂಗಲ್‌ನಿಂದ ಇಂಥಾ ಡಿಪೊಕ್ಕೆ ತಯಾರಿಯಿಂದ ಹೇರಿತಂದ್ದು ಕೊಡುವ ಯಾ ಹೇರಿ ತರುವ ಮಟ್ಟಿಗೆ ಯಾ ಜಮಾಯಿಸಿ ಹೇರಿತರುವ ಬಗ್ಗೆ ದರಖಾಸ್ತು" ಯಂದು ಬರದು ರವಾನಿಸತಕ್ಕದ್ದು.

3. ತುಮಕೂರು ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರು 31ನೇ ಜುಲೈವರಿಗೆ ದರಖಾಸ್ತುಗಳನ್ನ ಹಿಡಿಯುತ್ತಾರೆ.

4. ಕಂಟ್ರಾಕ್ಟು ಮಾಡತಕ್ಕವರುಗಳು ಮೇಲೆ ಹೇಳಿದ ಜಂಗಲ್‌ಗಳಿಂದ ಒಂದು ಜಂಗಲ್‌ಗಿಂತ ಹೆಚ್ಚಾದ ಜಂಗಲ್‌ಗೆ ಂದ ತಯಾರಿಯಿಸುವ ನಾಟಾಗಳನ್ನು ಮತ್ತು ಬಿದರು ಸವುದೆ ಚಿಲ್ಲರೆ ಪಸಾರೆ ಜಿನಸುಗಳನ್ನು ರಫ್ತು ಮಾಡುವದಕ್ಕೆ ದರಖಾಸ್ತು ಕೊಡುವ ಪಕ್ಷದಲ್ಲಿ ಲುಪ್ಟು ಕಮ್ಮಿದರಗಳಿಗೆ, ಮೇಲೆ ಹೇಳಿದ ಜಂಗಲ್‌ಗಳಿಂದ ನಾಟಾಗಳನ್ನು, ಬಿದರು ಮತ್ತು ಇತರೆ ಪಸಾರೆ ಜಿನಸು ಕಡಿದು ತಯಾರಿ ಯಾ ಜಮಾವಣೆಯಿಂದಾ ಯಾವ ಯಾವ ಡಿಪೊಗಳಿಗೆ ರಫ್ತು ಮಾಡುವದಕ್ಕೆ ಆಗುತ್ತೋ ಅದನ್ನ ಪ್ರತ್ಯೇಕವಾಗಿ ನಮೂದಿಸತಕ್ಕದ್ದು. ನಾಟಾ ಮತ್ತು ಬಿದರು ತಯಾರಿ ಯಿದುವರಿಗು ಡಿಸ್ಟ್ರಿಕ್ಟಿನಲ್ಲಿ ಜಾರಿಯಿರುವ ಪೂಮೂಲನಂತೆ ಯಿರಬೇಕು. ಕಡಿಯ ತಕ್ಕ ಮರಗಳನ್ನ ಯಿಲಾಖೆಯಿಂದ ಗುರ್ತು ಮಾಡಲ್ಪಡುತ್ತೆ.

5. ನಾಟಾಗಳ ವಿಚಾರದಲ್ಲಿ ಸಲೆ ಅಡಿ ಮದಕ್ಕೆ ಯಿಷ್ಟರಂತೆ ಯಂತಲು ಸಾಗುವಾನಿ ಸಂಣ ತೀರುಗಳು ಜಂತೆಗಳ ವಿಚಾರದಲ್ಲಿ ಗಾಡಿ ಬೋಜಾಕ್ಕೆ ಯಿಷ್ಟರಂತೆ ಯಂತ್ತಲು ನಮೂದಿಸಬೇಕು (ಗಾಡಿ ಬೋಜಾ ಅಂದರೆ ಸಂಣ ತೀರುಗಳು ಜಂತೆಗಳು ಅದರೆ 28 ಸಲೆ ಅಡಿಗಳು ಹೆಬ್ಬಿದರು ಆದರೆ 25 ಸಂಖೆ ಮೇವರು ಬಿದರು ಆದರೆ 150 ಸಂಖೆ ಕಿರಿಬಿದರು ಆದರೆ 200 ಸಂಖೆ ಈ ಮೇರಿಗೆ ಅನ್ವಯಿಸಬೇಕು).

6. ಸಾದೇ ವಿಚಾರದಲ್ಲಿ ಗಾಡಿ ಬೋಜಾ ಕಡಿಯುವದಕ್ಕೆ ಯಿಷ್ಟೆಂತಲು (ಗಾಡಿ ಬೋಜಾ ವಣಿಗಿರತಕ್ಕ ಸವುದೆ 40 ಮಣಕ್ಕೆ ಕಮ್ಮಿ ಯಿಲ್ಲದೆ ಯಿರಬೇಕು.) ಸಾಗಿಸುವದಕ್ಕೆ ಮೈಲಿ ನಂದಕ್ಕೆ ಯಿಷ್ಟೆಂತಲು ಯಿದೇ ಮೇರಿಗೆ ಪಸಾರೆ ಜಿನಸು ಜಮಾಯಿಸಿ ಸಾಗಿಸುವದಕ್ಕೆ ಸಹ ನಮೂದಿಸಬೇಕು.

7. ದರಖಾಸ್ತು ಅಂಗೀಕರಿಸಲ್ಪಟ್ಟ ಪ್ರತಿ ಒಬ್ಬ ಕಂಟ್ರಾಕ್ಟುದಾರು) ಯಾ ಕಂಟ್ರಾಕ್ಟುದಾರ್‌ರುಗಳು ಮೇಲ್ಕಂಡ ಸಾಮಾನುಗಳನ್ನ ತಯಾರಿಯಿಂದ ಯಾ ಜಮಾವಣೆಯಿಂದ ಮೇಲೆ ನಮೂದಿಸಿರುವ ಡಿಪೋಗಳಿಗೆ ಮಾಹೆಯಾನಾ ಇಲಾಖೆಯಿಂದ ಕೊಡಲ್ಪಡುವ ಅಂದಾಜುಗಳಂತೆ ನಡಸುವದಕ್ಕೆ ಬದ್ಧರಾಗಿರಬೇಕು.

8. ದರಖಾಸ್ತು ಅಂಗೀಕರಿಸಲ್ಪಟ್ಟ ಪ್ರತಿ ಒಬ್ಬ ಕಂಟ್ರಾಕ್ಟರು ಅವರು ಕ್ರಮವರಿತು ಕಂಟ್ರಾಕ್ಟು ಮಂಜೂರಾದ ವಂದು ವಾರದ ವಳಗಾಗಿ ಒರದುಕೊಡಬೇಕಾಗುವ ಮುಚ್ಚಳಿಕೆ ಅನುಸರಿಸಿ ಕೆಲಸ ನಡಸತಕ್ಕ ಖಾತರೀ ಬಗ್ಯಾಗಿ ಪ್ರತಿ ವಂದು ಜಂಗಲಿಗೆ 300 ರೂಪಾಯಿಗಳನ್ನು ತೇವಣಿ ಯಿಡಬೇಕು.

9. ಕೇವಲ ಕಮ್ಮಿದರಕ್ಕೆ ಕೊಟ್ಟರುವ ದರಖಾಸ್ತುಗಳನ್ನೇ ಆಗಲಿ ಮತ್ಯಾವ ತರಹಾದ ದರಖಾಸ್ತುಗಳನ್ನೇ ಆಗಲಿ ಅಂಗೀಕರಿಸುವದಕ್ಕೆ ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರು ಬದ್ಧರಾಗಿರುವದಿಲ್ಲ, ದರಖಾಸ್ತು ವಪ್ಪಿತವು ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವರ ಮಂಜೂರಾತಿಗೆ ವಳಪಟ್ಟದ್ದಾಗಿರುತ್ತೆ.

ನಮೂನೆ ಮೇಲೆ ಹೇಳಿರುವ ತಪಶೀಲ್ ಅಲ್ಲದೆ ಜಾಸ್ತಿ ಅಂಕಗಳನ್ನ ತಿಳಿಯಬೇಕೆಂದು ಅಪೇಕ್ಷಿಸಿದಲ್ಲಿ ಆ ತಪಶೀಲುಗಳು ತುಮಕೂರ ಡಿ ಕೊಡತಕ್ಕ ಫಾರೆಸ್ಟ್ ಆಫಿಸರವರ ಆಫಿಸಿನಲ್ಲಿ ದೊರೆಯುತ್ತೆ.

3. ಸದ

ನಾಮೂ ಪ್ರಕಾರ ಹೆ

ಬಿ. ಶ್ರೀನಿವಾಸರಾವ್,
ಸಬ್ ಅಸಿಸ್ಟೆಂಟ್ ಕಮಿಸರಿಯೇಟರಿ.